## 14. ಮೈಸೂರಿಗೂ ಬರುತ್ತೆ ಬುಲೆಟ್

ಕೆಲವೇ ವರ್ಷಗಳಲ್ಲಿ ಚೆನ್ನೈ ಹಾಗೂ ಮೈಸೂರು ನಡುವೆ ಬುಲೆಟ್ ರೈಲು ಸಂಚರಿಸಲಿದೆ. ದೇಶದಲ್ಲಿ ಹೈಸ್ಪೀಡ್ ಬುಲೆಟ್ ರೈಲುಗಳ ಸಂಚಾರಕ್ಕೆ ಅವಕಾಶ ಕಲ್ಪಿಸುವಂಥ ಬೃಹತ್ ಜಾಲವನ್ನು ನಿರ್ಮಿಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮಹತ್ವದ ಹೆಜ್ಜೆಯಿಟ್ಟಿದೆ. ಅದರಂತೆ, ಚೆನ್ನೈ ಮೈಸೂರು ಸೇರಿದಂತೆ 7 ಹೊಸ ಮಾರ್ಗಗಳಲ್ಲಿ ಹಳ್ಳಿಗಳನ್ನು ನಿರ್ಮಿಸುವ ಸಂಬಂಧ ಹೆಚ್ಚುವರಿ ಭೂಮಿಯ ಸ್ವಾಧೀನ ಪ್ರಕ್ರಿಯೆಗೆ ರೈಲ್ವೆ ಹಾಗೂ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ(ಎನ್‌ಎಚ್‌ಎಐ)ಮುಂದಾಗಿದೆ.

ದೇಶದಲ್ಲಿ ರೈಲು ಸಾರಿಗೆ ಜಾಲವನ್ನು ಇನ್ನಷ್ಟು ವಿಸ್ತರಿಸುವ ಹಾಗೂ ಅಭಿವೃದ್ಧಿಪಡಿಸುವ ಉದ್ದೇಶದಿಂದ ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್‌ವೆಯುದ್ದಕ್ಕೂ ಹಳಿಗಳನ್ನು ನಿರ್ಮಿಸಲು ಎನ್‌ಎಚ್‌ಎಐ ಇನ್ನಷ್ಟು ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ. ಇತ್ತೀಚೆಗೆ ಕೇಂದ್ರ ಸಚಿವ ನಿತಿನ್ ಗಡ್ಕರಿ ನೇತೃತ್ವದಲ್ಲಿ ನಡೆದ ಮೂಲ ಸೌಕರ್ಯ ಸಚಿವರ ಸಮೂಹದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

4 ಸದಸ್ಯರ ಸಮಿತಿ: ಭೂಸ್ವಾಧೀನ ಪ್ರಕ್ರಿಯೆಯ ಹೊಣೆಯನ್ನು ಹೆದ್ದಾರಿ ಪ್ರಾಧಿಕಾರಕ್ಕೆ ವಹಿಸಿ, ಮುಂದಿನ ಪ್ರಕ್ರಿಯೆಗಳ ಜವಾಬ್ದಾರಿ ನೋಡಿಕೊಳ್ಳಲು ನಾಲ್ವರು ಸದಸ್ಯರ ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ. ಇದು ಭೂಮಿಯ ಸ್ವಾಧೀನ ಹಾಗೂ ವೆಚ್ಚದ ಹಂಚಿಕೆ ಕುರಿತ ವಿಧಾನವನ್ನು ರಚಿಸಲಿದೆ. ಇನ್ನು ಭಾರತೀಯ ರೈಲ್ವೆಯು 7 ಹೈಸ್ಪೀಡ್ ರೈಲು ಮಾರ್ಗಗಳ ನೀಲನಕ್ಷೆ ಸಿದ್ಧತೆಯ ಹೊಣೆ ಹೊರಲಿದೆ ಎಂದು ಹೇಳಲಾಗಿದೆ.

ಆಧಾರ:ಉದಯವಾಣಿ, ದಿನಾಂಕ:31.07.2020